KARN010010782026

Presented on : 05-06-2026
Registered on : 05-06-2026
Decided on : 13-07-2026
Duration : 1 month 9 days

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

M H ANNAYYANAVAR
Digitally signed by M H ANNAYYANAVAR
Date: 2026.07.13 17:40:02 +0530

**ದಿನಾಂಕ 13 ನೇ ಜುಲೈ ಮಾಹೆ 2026**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 401/2026**

| | |
|---|---|
| ಅರ್ಜಿದಾರರು : (ಆರೋಪಿ-1) | ಶ್ರೀ ಗುರುಪ್ರಸಾದ್,<br>ಬಿನ್ ಚಂದ್ರಯ್ಯ,<br>ವಯಸ್ಸು 25 ವರ್ಷ.<br>ವಾಸಃ ಮಾದಾಪುರ ಗ್ರಾಮ, ವಿರೂಪಾಕ್ಷಿಪುರ ಹೋಬಳಿ,<br>ಚನ್ನಪಟ್ಟಣ ತಾಲ್ಲೂಕು,<br>ಬೆಂಗಳೂರು ದಕ್ಷಿಣ ಜಿಲ್ಲೆ.<br>(ಪರವಾಗಿ ಶ್ರೀ ಹೆಚ್.ಎಸ್.ಆರ್., ವಕೀಲರು) |

- ವಿರುದ್ಧ -

| | |
|---|---|
| ಎದುರುದಾರರು: | ಸರ್ಕಾರದ ಪರವಾಗಿ ಅಕ್ಕೂರು ಪೊಲೀಸ್ ಠಾಣೆ,<br>ಬೆಂಗಳೂರು ದಕ್ಷಿಣ ಜಿಲ್ಲೆ.<br>(ಪರವಾಗಿ ಸರ್ಕಾರಿ ಅಭಿಯೋಜಕರು) |

*****

## <u>ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **482** ರಡಿ ಜಾಮೀನು ಅರ್ಜಿಯ ಮೇಲೆ ಆದೇಶ</u>

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರ ಅಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸಿ, ಅಕ್ಕೂರು ಪೊಲೀಸ್ ಠಾಣಾಧಿಕಾರಿಯವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಅರ್ಜಿದಾರು ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಅರ್ಜಿದಾರ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರ್ಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿದಾರರ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿಯುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?
2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 : ಸಕಾರಾತ್ಮಕವಾಗಿ

ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:

## ಕಾರಣಗಳು

5. ಅಂಶ ಸಂಖ್ಯೆ **1:** ಪಿರ್ಯಾದುದಾರರು ಕೊಟ್ಟ ದೂರಿನಂತೆ ಅಕ್ಕೂರು ಪೊಲೀಸ್ ಠಾಣಾಧಿಕಾರಿಗಳು ಅರ್ಜಿದಾರರ ವಿರುದ್ಧ ಅಕ್ಕೂರು ಪೊಲೀಸ್ ಠಾಣಾ ಅಪರಾಧ ಸಂಖ್ಯೆ 153/2024 ಕರ್ನಾಟಕ ವಿದ್ಯುತ್ ಕಾಯಿದೆ 2003, ಕಲಂ.136 ಮತ್ತು ಭಾರತೀಯ ನ್ಯಾಯ ಸಂಹಿತೆ 2023 ಕಲಂ.303(2), 324(3), 112(2) ಸಹಕಲಂ.3(5)ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

6. **ಪ್ರಕರಣದ ಸಂಕ್ಷಿಪ್ತ ಸಾರಾಂಶ:** ದೂರನ್ನು ಪರಿಶೀಲಿಸಲಾಗಿ, ಆರೋಪಿತರು ಸಂಘಟಿತರಾಗಿ ವಿದ್ಯುತ್ ಸರಬರಾಜಿಗೆ ಅಳವಡಿಸಿದ ಹಲವು ಟ್ರಾನ್ಸ್‌ಫಾರ್ಮ್‌ಗಳನ್ನು ಕಳುವು ಮಾಡಿದ್ದು, ಸದರಿ ಟ್ರಾನ್ಸ್‌ಫಾರ್ಮಗಳನ್ನು ಬೇರೆ ಬೇರೆ ಕಡೆಗಳಿಂದ ಕಳುವು

ಮಾಡಿದ್ದು, ಈ ಪ್ರಕರಣದಲ್ಲಿ 7 ಟ್ರಾನ್ಸ್‌ಫಾರ್ಮರ್‌ಗಳನ್ನು ವಶಕ್ಕೆ ಪಡೆಯಲಾಗಿರುತ್ತದೆ. ಆರೋಪಿತರ ಕೃತ್ಯದಿಂದ ಬೆಸ್ಕಾಂ ಇಲಾಖೆ ಇವರಿಗೆ ವಿದ್ಯುತ್ ಸರಬರಾಜು ಮಾಡಲು ಅಡೆತಡೆ ಉಂಟಾಗಿದ್ದು, ಅದಲ್ಲದೇ ಆರೋಪಿತರು ಅವರ ಉಪಕರಣಗಳನ್ನು ಕಳುವು ಮಾಡಿದ್ದರಿಂದ ಬೆಸ್ಕಾಂ ಇಲಾಖೆಗೆ ನಷ್ಟವುಂಟಾಗಿರುತ್ತದೆ. ಈ ಕಾರಣದಿಂದ ಪಿರ್ಯಾದಿ ಅರ್ಜಿದಾರರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ.

7. ಅರ್ಜಿದಾರರ ಮೇಲೆ ಇರುವಂತ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆ ಆಗಿದ್ದರೂ ಸಹಿತ ಜೀವವಾಧಿ ಶಿಕ್ಷೆ ಮತ್ತು ಮರಣ ದಂಡನೆ ವಿಧಿಸತಕ್ಕಂತಹ ಆಪಾದನೆ ಆಗಿರುವುದಿಲ್ಲ ಮತ್ತು ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಂತಹ ಆಪಾದನೆ ಆಗಿರುತ್ತದೆ.

8. ದೋಷಾರೋಪಣಾ ಪಟ್ಟಿ ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯದಲ್ಲಿ ಆರೋಪಿ 2 ರಿಂದ 7 ರವರು ಜಾಮೀನು ಪಡೆದುಕೊಂಡಿರುತ್ತಾರೆ. ಎದುರುದಾರ ಪೊಲೀಸರು ಸದರಿ ಪ್ರಕರಣದಲ್ಲಿ ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಸಿ.ಸಿ.ನಂ.177/2025 ನಂಬರ್ ಕೊಟ್ಟಿರುತ್ತಾರೆ. ತನಿಖೆ ಪೂರ್ಣಗೊಂಡಿರುವುದರಿಂದ ಅರ್ಜಿದಾರರು ಮುಂದುವರೆದ ತನಿಖೆಗೆ ಅವಶ್ಯಕತೆ ಇರುವುದಿಲ್ಲ. ಇನ್ನುಳಿದ ಆರೋಪಿತರು ಜಾಮೀನು ಪಡೆದುಕೊಂಡಿರುವುದರಿಂದ ಸಮಾನತೆಯ ಆಧಾರದ ಮೇಲೆ ಅರ್ಜಿದಾರರು ಜಾಮೀನು ಪಡೆಯಲು ಅರ್ಹರಿರುತ್ತಾರೆ.

ಇಂಥ ಸಂದರ್ಭದಲ್ಲಿ ಅರ್ಜಿದಾರರು ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುತ್ತಾರೆ.

9. ಅರ್ಜಿದಾರರು ಬೆಂಗಳೂರು ದಕ್ಷಿಣ ಜಿಲ್ಲಾ ರಹವಾಸಿಯಾಗಿದ್ದು ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿದ್ದು ತಲೆಮರೆಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ಅರ್ಜಿದಾರರಿಗೆ ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡುವುದು ಸೂಕ್ತ ಅಂತ ನ್ಯಾಯಾಲಯಕ್ಕೆ ಕಂಡುಬಂದಿರುವುದರಿಂದ ಸದರಿ ಅಂಶ ಸಂಖ್ಯೆ ***1*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

10. **ಅಂಶ ಸಂಖ್ಯೆ 2:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## ಆದೇಶ

ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ಅಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಒಂದು ವೇಳೆ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಸದರಿ ಅರ್ಜಿದಾರರಿಂದ ರೂ.50,000/- (ಐವತ್ತು ಸಾವಿರ ರೂಪಾಯಿ) ಸ್ವ ಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಸೂಕ್ತ ಜಾಮೀನುದಾರರನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಹಾಗೂ ಅರ್ಜಿದಾರ ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

<u>ಷರತ್ತುಗಳು</u>

1. ಅರ್ಜಿದಾರರು ತಮ್ಮ ವಿಳಾಸಕ್ಕೆ ಸಂಬಂಧಪಟ್ಟಂತೆ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.
2. ಅರ್ಜಿದಾರರು ಅಭಿಯೋಜಕ ಪಕ್ಷದ ಸಾಕ್ಷಿಗಳನ್ನು ಯಾವುದೇ ರೀತಿಯಿಂದಲೂ ಹೆದರಿಸತಕ್ಕದ್ದಲ್ಲ.
3. ನ್ಯಾಯಾಲಯಕ್ಕೆ ತಪ್ಪದೇ ಎಲ್ಲಾ ವಿಚಾರಣೆ ದಿನಾಂಕ ದಂದು ಹಾಜರಿರತಕ್ಕದ್ದು.
4. ಅರ್ಜಿದಾರರು ಪುನಃ ಇಂತಹ ಪ್ರಕರಣಗಳಲ್ಲಿ ಭಾಗಿಯಾಗತಕ್ಕದ್ದಲ್ಲ.
5. ಆದೇಶ ಆದ 15 ದಿವಸದೊಳಗೆ ಅರ್ಜಿದಾರರು ಸಂಬಂಧಪಟ್ಟ ದಂಡಾಧಿಕಾರಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆಯಲು ಆದೇಶಿಸಲಾಗಿದೆ.

ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ತಕ್ಷಣವೇ ಜಾಮೀನು ಅರ್ಜಿ ವಜಾ ಆಗತಕ್ಕದ್ದು ಅಂತಾ ಆದೇಶ ಮಾಡಲಾಗಿದೆ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ III ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **13** ನೇ ಜುಲೈ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್.ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

**** ****

NGR